# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.-8887/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/03/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಅಮಾಸೆಬೈಲು ಗ್ರಾಮದ ಸರ್ವೆ ನಂ. 200, 65/4 ಮತ್ತು 65/10 ರಲ್ಲಿರುವ ಸರ್ಕಾರಿ ಸ್ಥಳವನ್ನು ಸಾರ್ವಜನಿಕರು ಒತ್ತುವರಿ ಮಾಡದಂತೆ ಹಾಗೂ ಒತ್ತುವರಿ ಮಾಡಿದ್ದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಿ ಸರ್ಕಾರಿ ಸ್ಥಳವನ್ನು ಸಂರಕ್ಷಿಸುವ ಸಲುವಾಗಿ ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಲಕ್ಷ್ಮಣ ಹೆಗ್ಡೆ ಬಿನ್ ನಾಗಯ್ಯ ಹೆಗ್ಡೆ, ಅಮಾಸೆಬೈಲು ಗ್ರಾಮ ಮತ್ತು ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಗೋಪಾಲ ದೇವಾಡಿಗ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅಮಾಸೆಬೈಲು ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಹಾಲಿ ಪಂಚಾಯತ್ ಆಭಿವೃದ್ಧಿ ಅಧಿಕಾರಿಗಳು, ಆಜ್ರಿ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ದ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಕುಂದಾಪುರ ತಾಲ್ಲೂಕು, ಅಮಾಸೆಬೈಲು ಗ್ರಾಮದ ಗ್ರಾಮ ಪಂಚಾಯ್ತಿ ಕಛೇರಿಯ ಹಿಂಭಾಗದಲ್ಲಿನ ಸರ್ವೆ ನಂ. 200 ರಲ್ಲಿ ಸುಮಾರು 2.75 ಎಕರೆ ಜಮೀನಿದ್ದು, ಈ ಸ್ಥಳವು ಸಾರ್ವಜನಿಕ ಆಸ್ಪತ್ರ ಉದ್ಯಾನವನ, ಪಶುವೈದ್ಯ ಶಾಲಾ ಇನ್ನೂ ಮುಂತಾದ ಸಾರ್ವಜನಿಕ ಹಿತಾಸಕ್ತಿಯುಳ್ಳ ಕಟ್ಟಡಗಳಿಗೆ ಸೂಕ್ತ ಸ್ಥಳವಾಗಿದ್ದು, ಈ ಸ್ಥಳದಲ್ಲಿ ಶ್ರೀ ಚಂದ್ರಾಶೆಟ್ಟಿ ಮತ್ತು ಅವರ ಪತ್ನಿ ಶ್ರೀಮತಿ ಸಂಜಾತಶೆಟ್ಟಿ ಇವರು ಅಕ್ರಮವಾಗಿ ಸದರಿ ಜಾಗದಲ್ಲಿ ಶೆಡ್ಡು ನಿರ್ಮಿಸಿ ನಂತರ ವಾಸ್ತವ್ಯ ಕಟ್ಟಡ ಕಟ್ಟಲು ಪ್ರಯತ್ನಿಸಿರುತ್ತಾರೆ. ಸರ್ಕಾರಿ ಸ್ಥಳದಲ್ಲಿ ಮನೆ ಕಟ್ಟಲು ಪ್ರಯತ್ನಿಸಿದ್ದು, ಈ ಬಗ್ಗೆ ದೂರುದಾರರು ಹಾಗೂ ಅವರ ಸಂಗಡಿಗರು ಈ ಬಗ್ಗೆ ಆಕ್ಷೇಪಣೆ ನೀಡಿದ್ದರೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅದನ್ನು ಲೆಕ್ಕಿಸದೇ ಸದರಿ ಶ್ರೀಮತಿ ಸುಜಾತ ಶೆಟ್ಟಿ ಹಾಗೂ ಶ್ರೀ ಚಂದ್ರಾಶೆಟ್ಟಿಯವರಿಗೆ ಸರ್ಕಾರಿ ಜಾಗದಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ನೀಡಿರುತ್ತಾರೆ. ಈ ಬಗ್ಗೆ

ಮೇಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಆದ್ದರಿಂದ ಸದರಿ ಸರ್ಕಾರಿ ಜಾಗವನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಕಾಯ್ದಿರಿಸಲು ಹಾಗೂ ಎದುರುದಾರರ ವಿರುದ್ದ ಸೂಕ್ತ ಕ್ರಮ ಜರುಗಿಸಲು ಕೋರಿರುತ್ತಾರೆ.

3. ಪ್ರಕರಣದ ದೂರಿನಂಶಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಸರ್ವೆ ನಂ. 200ರ (ಅಮಾಸೆಬೈಲು ಗ್ರಾಮದ ಜಾಗ) 2.75 ಎಕರೆ ಜಮೀನು ಸರ್ಕಾರಿ ಜಾಗವೆಂದು ಕಂಡುಬರುತ್ತದೆ. ಈ ಜಾಗದಲ್ಲಿ ಈ ಹಿಂದೆ ಕಟ್ಟಡ ಕಟ್ಟಲು ಶ್ರೀ ಶರೀಫ್ ಸಾಬ್ ಅನ್ನುವವರಿಗೆ ಪಂಚಾಯತಿ ವತಿಯಿಂದ ಪರವಾನಿಗೆ ನೀಡಿರುವುದು ಕಂಡುಬರುತ್ತದೆ. ನಂತರ ಅದೇ ಜಾಗದಲ್ಲಿ ಶ್ರೀ ಚಂದ್ರಾಶೆಟ್ಟಿ ಹಾಗೂ ಶ್ರೀಮತಿ ಸುಜಾತ ಅವರಿಗೆ ಕಟ್ಟಡ ನಿರ್ಮಿಸಲು ಅನುಮತಿ ನೀಡುವ ಬಗ್ಗೆ ಪಂಚಾಯತಿ ಸಭೆಯಲ್ಲಿ ಠರಾವು ಪಾಸ್ ಮಾಡಿರುವುದು ಕಂಡುಬರುತ್ತದೆ.

4. ಪಿರ್ಯಾದುದಾರರು ಹಾಗೂ ಸಾರ್ವಜನಿಕರು ಸರ್ಕಾರಿ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಕೊಟ್ಟಿದ್ದು ಸದರಿಯವರು ಕ್ರಮ ಜರುಗಿಸದೆ ಇರುವ ಬಗ್ಗೆ ಕಂಡುಬರುತ್ತದೆ.

5. ದೂರಿನ ಆರೋಪಗಳ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರೀತ್ಯಾ ತನಿಖೆ ಕೈಗೊಂಡಿದ್ದು ಎದುರುದಾರರಿಂದ ಆಕ್ಷೇಪಣೆಗಳನ್ನು ಪಡೆಯಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಸರ್ಕಾರಿ ಭೂಮಿ ಅಮಾಸೆಬೈಲು ಗ್ರಾಮದ ಸರ್ವೆ ನಂ. 200 ರಲ್ಲಿ 2.75 ಎಕರೆ ಭೂಮಿಯಲ್ಲಿ ಚಂದ್ರಶೆಟ್ಟಿ ಮತ್ತು ಅವರ ಪತ್ನಿ ಸುಜಾತಶೆಟ್ಟಿ ರವರು ಆಕ್ರಮಣ ಮಾಡಿ ಶೆಡ್ ನಿರ್ಮಿಸಿದ್ದಾರೆ ಎನ್ನುವುದು ಸರಿಯಿಲ್ಲ. ಲಕ್ಷ್ಮಣ ಹೆಗ್ಡೆಯವರು ದೂರಿನ ಮೇಲೆ ಕುಂದಾಪುರ ತಹಶೀಲ್ದಾರ್ ರವರು ಸ್ಥಳವನ್ನು ಅಳತೆ ಮಾಡಿಸಿದಾಗ ಸರ್ವೆಯರ್ ರವರು ಅಳತೆ ಮಾಡಿ ನಕ್ಷೆ ತಯಾರಿಸಿ ನೀಡಿದ ವರದಿಯಲ್ಲಿ ವಿವಾದಿತ ಕಟ್ಟಡ ಶೆಡ್ ಸರ್ವೆ ನಂ. 65/4 ರಲ್ಲಿ ಇದೆ ಎಂದು ವರದಿ ಮಾಡಿರುತ್ತಾರೆ. ಸದರಿ ನಕ್ಷೆ ಲಗತ್ತಿಸಲಾಗಿದೆ. ಸರ್ವೆ ನಂ. 65/4 ರಲ್ಲಿ 1988ಕ್ಕೆ ಪೂರ್ವದಲ್ಲಿಯೇ ಶರೀಪ್ ಸಾಹೇಬ್ ಎನ್ನುವವರು ಒಂದು ಮನೆಯನ್ನು ಕಟ್ಟಿಕೊಂಡು ಅದಕ್ಕೆ ಗ್ರಾಮ ಪಂಚಾಯತಿಯಿಂದ ಕಟ್ಟಡ ನಂ. 1/74 ಎಂದು ನೀಡಲಾಗಿದ್ದು, ಕರ ನಿರ್ಧರಣಾ ಪಟ್ಟಿಯಲ್ಲಿ ದಾಖಲಾಗಿರುತ್ತದೆ. ಆ ನಂತರ 1993–94ನೇ ಸಾಲಿನಲ್ಲಿ ಸದರಿ ಶರೀಫ್ ಸಾಹೇಬರಿಗೆ ಸರ್ಕಾರದ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರಾಗಿ ಅವರು ಅದೇ ಸ್ಥಳದಲ್ಲಿ ಮನೆ ಕಟ್ಟಿಕೊಂಡು ಅವರಿಗೆ ಸರ್ಕಾರವು ದಿನಾಂಕ: 03/05/2015 ರಂದು ಆಶ್ರಯ ಯೋಜನೆಯಡಿಯಲ್ಲಿ ಪಡೆದ ಸಾಲವನ್ನು ಮನ್ನಾ ಮಾಡಿ ತಿಳುವಳಿಕೆ ಪತ್ರ ನೀಡಿರುತ್ತಾರೆ. ಈ ಮದ್ಯದಲ್ಲಿ ಸದರಿ ಶರೀಫ್ ಸಾಹೇಬರು ಸದರಿ ಮನೆ ರಿಪೇರಿ ಮಾಡಲು ದಿನಾಂಕ: 04/03/2014 ರಂದು ಗ್ರಾಮ ಪಂಚಾಯತ್‌ನಿಂದ

ಫರ್ಮಿಶನ್ ಪಡೆದು ಮನೆ ರಿಪೇರಿ ಮಾಡಿರುತ್ತಾರೆ. ಸದರಿ ಶರೀಫ್ ಸಾಹೇಬರು ದಿನಾಂಕ: 17/10/2015 ರಂದು ಗ್ರಾಮ ಪಂಚಾಯತ್ ಕಛೇರಿಗೆ ಸ್ವತ: ಹಾಜರಾಗಿ ನೋಟರಿಯವರಿಂದ ದೃಢೀಕರಿಸಿದ ಒಂದು ಪ್ರಮಾಣ ಪತ್ರ ಸಲ್ಲಿಸಿ, ತಾವು ಸದರಿ ಮನೆಯನ್ನು ಸುಜಾತ ಶೆಟ್ಟಿ ಕೋಂ ಚಂದ್ರಶೇಖರ್ ಶೆಟ್ಟಿ ಇವರಿಗೆ ರೂ.52,000/–ಕ್ಕೆ ಮಾರಾಟ ಮಾಡಿರುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತಾರೆ. ಶರೀಫ್ ಸಾಹೇಬರು ಅವರು ಮನೆ ಕಟ್ಟಿಕೊಂಡಿರುವ ಸರ್ವೆ ನಂ. 65/4ರ ಅಂಶವನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮದ ಸೆಕ್ಷನ್ 94ಸಿ ಯಡಿಯಲ್ಲಿ ತನಗೆ ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದು, ತನಿಖೆಗೆ ಬಾಕಿ ಇರುತ್ತದೆ ಎಂದು ಹೇಳಿರುತ್ತಾರೆ. ಗ್ರಾಮ ಪಂಚಾಯತು 1988ನೇ ಇಸ್ವಿಗೂ ಮೊದಲೇ ಇರುವ ಕಟ್ಟಡವನ್ನು ರಿಪೇರಿ ಮಾಡಲು ಶರೀಪ್ ಸಾಹೇಬರಿಗೆ ಪರ್ಮಿಶನ್ ನೀಡಿದೆಯೇ ಹೊರತು ಸರ್ವೆ ನಂ. 200ರಲ್ಲಿ ಯಾವುದೇ ಭೂಮಿಯನ್ನು ಅತಿಕ್ರಮಿಸಲು ಸಹಾಯ ಮಾಡಿರುವುದಿಲ್ಲ. ಹಾಗಾಗಿ, ಶ್ರೀ ಲಕ್ಷ್ಮಣ ಹೆಗ್ಡೆ ಯವರು ಮಾಡಿರುವ ಆರೋಪಕ್ಕೆ ಯಾವುದೇ ಆಧಾರ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

6. ಆಕ್ಷೇಪಣೆಗಳೊಂದಿಗೆ ತಾಲ್ಲೂಕು ಭೂಮಾಪಕರು ಕುಂದಾಪುರ ರವರು ನೀಡಿದ ಕಚ್ಛಾ ನಕ್ಷೆ ಪ್ರತಿ, ಶರೀಫ್ ಸಾಬ್‌ಗೆ ನೀಡಿದ ನಮೂನೆ 1ರ ಪ್ರತಿ, ಶರೀಫ್ ರವರು ಮಾಡಿರುವ ಕ್ರಯ ಕರಾರು ಪತ್ರ ಸರ್ವೆ ನಂ. 65/4ರಲ್ಲಿರುವ ಮನೆಗೆ ಸಂಬಂಧಿಸಿದ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

7. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕುಂದಾಪುರ ರವರು ತನಿಖಾ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ದಿನಾಂಕ: 24/01/2017 ರಂದು ಗ್ರಾಮ ಪಂಚಾಯತ್ ಅಮಾಸೆಬೈಲಿಗೆ ಬೇಟಿ ನೀಡಿದ್ದು ಈ ಸಂದರ್ಭದಲ್ಲಿ ದೂರುದಾರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಹಾಜರಾಗಿದ್ದು ಸದರಿಯವರ ಸಮಕ್ಷಮದಲ್ಲಿ ಅನಧೀಕೃತಯೆನ್ನಲಾದ ಕಟ್ಟಡದ ಬಗ್ಗೆ ವಿವರಣೆ ಪಡೆಯಲಾಗಿ ಕುಂದಾಪುರ ತಹಶೀಲ್ದಾರ್ ಆದೇಶದಂತೆ ತಾಲ್ಲೂಕು ಭೂಮಾಪಕರು ಒದಗಿಸಿರುವ ನಕ್ಷೆಯನ್ನು ಪರಿಶೀಲಿಸಲಾಗಿ ಸರ್ವೆ ನಂ. 200ರಲ್ಲಿ ಯಾವುದೇ ಕಟ್ಟಡವಿರುವುದಿಲ್ಲ ಎಂಬುದಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ವಿವರಣೆ ನೀಡಿರುತ್ತಾರೆ. ಆದಾಗ್ಯೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂ. 200/4 ರಲ್ಲಿ 0.13 ಎಕರೆ ಜಾಗ ಮಾತ್ರವಿದ್ದು ಹತ್ತಿರದಲ್ಲಿ ಗ್ರಾಮ ಪಂಚಾಯತ್ ಕುಡಿಯುವ ನೀರಿನ ಮೇಲ್ಮಟ್ಟದ ಟ್ಯಾಂಕಿಯಿರುವುದರಿಂದ ಸದರಿ ಉದ್ದೇಶಕ್ಕೆ ಮುಂದೆ ಅವಶ್ಯವಿರುವುದರಿಂದ ಕುಡಿಯುವ ನೀರಿನ ಉದ್ದೇಶಕ್ಕೆ ಈ ಜಾಗವನ್ನು ಕಾಯ್ದಿರಿಸಲು ಅಭಿಪ್ರಾಯಪಟ್ಟು ಈ ಬಗ್ಗೆ ದೂರುದಾರರಾದ ಲಕ್ಷ್ಮಣ ಹೆಗ್ಡೆಯವರು ಒಪ್ಪಿರುತ್ತಾರೆ. ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನಾ ಮಹಜರು ವರದಿ ಮತ್ತು ಆಗಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೋಪಾಲ ದೇವಾಡಿಗ ಇವರ ವೈಯುಕ್ತಿಕ ಹೇಳಿಕೆಯನ್ನು ಲಗತ್ತಿಸಿದೆ ಎಂದು ನಮೂದಿಸಿರುತ್ತಾರೆ.

8. ಪಿರ್ಯಾದುದಾರರು ಪ್ರತ್ಯುತ್ತರವನ್ನು ಲಗತ್ತು ದಾಖಲೆಗಳೊಂದಿಗೆ ಸಲ್ಲಿಸಿದ್ದು ತಮ್ಮ ಪತ್ರ ದಿನಾಂಕ: 29/07/2017 ರಲ್ಲಿ ದೂರಿನಲ್ಲಿ ಸರ್ವೆ ನಂಬರ್‌ನ್ನು 65-4 ಎಂದು ಕಾಣಿಸುವ ಬದಲು ಪೂರ್ಣವಾಗಿ ಸರ್ವೆ ನಂ. 200 ಎಂದು ಕಾಣಿಸಿರುತ್ತೇನೆ. ಸರ್ವೆ ನಂ. 65/4 ರಲ್ಲಿ 0.80 ಎಕರೆ 65/10 ರಲ್ಲಿ 0.21 ಎಕರೆ ಹಾಗೂ ಸರ್ವೆ ನಂ. 200/4ರಲ್ಲಿ 0.11 ಎಕರೆ ಒಟ್ಟು 1.12 ಎಕರೆ ಪೂರ್ಣ ಸ್ಥಳವು ಸರ್ಕಾರಿ ಸ್ಥಳವಾಗಿದ್ದು, ಅದು ಚಂದ್ರಶೆಟ್ಟಿ ಮತ್ತು ಪತ್ನಿ ಸುಜಾತಶೆಟ್ಟಿ ರವರು ಒತ್ತುವರಿ ಮಾಡಿಕೊಂಡಿರುತ್ತಾರೆಂದು ತಾಲ್ಲೂಕು ಭೂಮಾಪಕರು ಅಳತೆ ಮಾಡಿ ನಂತರ ವರದಿ ನೀಡಿರುತ್ತಾರೆ. ನಾನು ಪತ್ರದಲ್ಲಿ ತಿಳಿಸಿರುವ ಸರ್ಕಾರಿ ಸ್ಥಳವು ಪೂರ್ಣ ಸರ್ವೆ ನಂ. 200 ಎಂದು ತಿಳಿದಿದ್ದರು, ಇದರಲ್ಲಿ 200 ಹಾಗೂ ಇನ್ನಿತರೆ ಸರ್ವೆ ನಂಬರುಗಳು ಒಳಗೊಂಡಿದೆ ಎಂದು ಈ ಮೂರು ಸರ್ವೆ ನಂಬರದಲ್ಲಿಯೂ ಅಕ್ರಮ ಮಾಡಿರುವುದು ನಿಜವಾಗಿರುತ್ತದೆ ಸರ್ವೆ ನಂ. 200 ರಲ್ಲಿ ಅಕ್ರಮ ಕಟ್ಟಡ ಮಾಡಿರುವುದು ಅಲ್ಲದಿದ್ದರೂ ಪಕ್ಕದ 65-4 ರಲ್ಲಿ ಸರ್ಕಾರಿ ಸ್ಥಳ 0.80 ಎಕರೆ ಆಗಿರುತ್ತದೆ. ವಿನಹ ಅಕ್ರಮ ಕಟ್ಟಡ ಅಲ್ಲ ಎಂದು ಎಲ್ಲಿಯೂ ಸ್ಪಷ್ಟವಾಗಿರುವುಇಲ್ಲ. ಆದ್ದರಿಂದ, ನನ್ನ ಮೂಲ ಅರ್ಜಿ ಸರ್ವೆ ನಂ. 200 ಅಲ್ಲದೇ ಇದರೊಂದಿಗೆ ಸರ್ಕಾರಿ ಸರ್ವೆ ನಂ. 65/4, 65/10 ಕೂಡ ಸೇರಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಒಟ್ಟಿನಲ್ಲಿ ಬೆಲೆಬಾಳುವ ಹಾಗೂ ಸಾರ್ವಜನಿಕರಿಗೆ ಅತಿ ಮುಖ್ಯವಾಗಿ ಮೇಲೆ ಹೇಳಿದ ಸರ್ಕಾರಿ ಕಟ್ಟಡಗಳನ್ನು ಕಟ್ಟಲು ಮೀಸಲಾಗಿಡಬೇಕಾದ ಸ್ಥಳವನ್ನು ಅಧಿಕಾರಿಗಳು ಶಾಮೀಲಾಗಿ ಅಕ್ರಮ ಮಾಡಿರುವುದು ಸತ್ಯವಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

9. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ಜಿಲ್ಲೆ ರವರಿಂದ ತನಿಖಾ ವರದಿ ದಿ:14/08/2017 ಸ್ವೀಕೃತವಾಗಿದ್ದು, ಸದರಿ ವರದಿಯಲ್ಲಿ ಈ ಕೆಳಕಂಡಂತೆ ನಮೂದಿರುತ್ತದೆ:-

*"ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ ತಾಲ್ಲೂಕಿನ ಸರ್ವೇ ನಂ.200, 65-4 ಮತ್ತು 65-10 ರಲ್ಲಿನ ಸ್ಥಳಕ್ಕೆ ದಿ: 02/11/2017 ರಂದು ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿದ್ದು, ಆ ಸಮಯ ಗೋವಿಂದ ಶೆಟ್ಟಿ ರವರು ಹಾಜರಿದ್ದು, ಅವರು ತೋರಿಸಿದಂತೆ ದೂರು ಅರ್ಜಿಯಲ್ಲಿ ತಿಳಿಸಿದ ಸ್ಥಳವು ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಗ್ರಾಮದ ತಾಲ್ಲೂಕಿನ ಸರ್ವೆ ನಂ.200/1 ರಲ್ಲಿ ಸರಕಾರಿ ಸ್ಥಳ ಇದ್ದು, ಅದರಲ್ಲಿ ಸಾರ್ವಜನಿಕ ಆಸ್ಪತ್ರೆ, ಅಂಗನವಾಡಿ ಕಟ್ಟಡ, ಪಂಚಾಯತ್ ಕಛೇರಿ ಕಟ್ಟಡ ಇರುವುದು ಕಂಡು ಬಂದಿರುತ್ತದೆ. ಅರ್ಜಿಯಲ್ಲಿ ನಮೂದಿಸಿದಂತೆ ಈ ಸ್ಥಳದಲ್ಲಿ ಯಾವುದೇ ಅಕ್ರಮ ಕಟ್ಟಡಗಳು ಕಂಡು ಬಂದಿರುವುದಿಲ್ಲ. ಸರ್ವೆ ನಂಬರ್ 65-4 ರಲ್ಲಿನ 9 ಸೆಂಟ್ಸ್ ಸ್ಥಳದಲ್ಲಿ ಒಂದು ತಗಡು ಶೀಟಿನ ಕಟ್ಟಡ ಇದ್ದು, ಇದನ್ನು ಕೆಂಪು ಕಲ್ಲಿನಿಂದ ಕಟ್ಟಿದ್ದು, ಇದರಲ್ಲಿ ಸುಜಾತ ಶೆಡ್ತಿ ರವರು ವಾಸವಾಗಿರುವುದು ಕಂಡು ಬಂದಿರುತ್ತದೆ. ಸುಜಾತ ಶೆಡ್ತಿರವರು ಸರ್ವೆ*

ನಂಬರ್ 65–25ರ ಸ್ಥಳಕ್ಕೆ ಹೋಗಲು ದಾರಿ ಇಲ್ಲದ ಕಾರಣ, ಅದಕ್ಕೆ ತಾಗಿ ಇದ್ದ 65–4 ರಲ್ಲಿಯ 9 ಸೆಂಟ್ಸ್ ಜಾಗವನ್ನು ಖರೀದಿಸಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಜಾಗಕ್ಕೆ ಪ್ರಸ್ತುತ ಹಕ್ಕು ಪತ್ರ ಬಂದಿರುತ್ತದೆ.

ಸದರಿ ದೂರು ಅರ್ಜಿಯ ವಿಚಾರಣೆಯಿಂದ ಹಾಗೂ ದಾಖಲಾತಿ ಪರಿಶೀಲಿನೆಯಿಂದ ಅಮಾಸೆಬೈಲು ಗ್ರಾಮದ ಸರ್ವೇ ನಂ.65/4 ರಲ್ಲಿ 1993–94ರ ಶ್ರೇಣಿ ಅಡಿಯಲ್ಲಿ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಮಂಜೂರಾದ ಸರಕಾರದ ಮನೆಯಲ್ಲಿ ಶ್ರೀ ಶರೀಪ್ ಸಾಹೇಬ್ ಎಂಬುವರು ವಾಸ್ತವ್ಯದಲ್ಲಿ ಇದ್ದು, ಸದರಿ ಕಟ್ಟಡಕ್ಕೆ ಅಮಾಸೆಬೈಲು ಗ್ರಾಮ ಪಂಚಾಯತ್ ಮನೆ ನಂಬರ್ 1–74 ಎಂದು ನೀಡಲಾಗಿದ್ದು, ಸದರಿ ಮನೆ ರಿಪೇರಿ ಬಗ್ಗೆ ಶ್ರೀ ಶರೀಪ್ ಸಾಹೇಬರ ಅರ್ಜಿಯಂತೆ ಗ್ರಾಮ ಪಂಚಾಯತ್ ನಿರ್ಣಯ ನಂ.72/2 ದಿ: 26/02/2014 ರ ಮೇರೆಗೆ ಪಿ.ಡಿ.ಓ ಶ್ರೀ ಗೋಪಾಲ ದೇವಾಡಿಗರವರು ಪರವಾನಿಗೆ ದಿ:04/03/2014 ರಂತೆ ಮಂಜೂರು ಮಾಡಿದ್ದು, ಸದರಿಯವರು ಪರವಾನಿಗೆ ಮಂಜೂರು ಮಾಡುವ ಪೂರ್ವದಲ್ಲಿ ಮನೆ ಇರುವ ಜಾಗದ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡದೇ, ಸರಕಾರಿ ಜಾಗದಲ್ಲಿದ್ದ ಮನೆಗೆ ದುರಸ್ಥಿಯ ಬಗ್ಗೆ ಪರವಾನಿಗೆ ಮಂಜೂರು ಮಾಡಿರುವುದು ಕಂಡು ಬಂದಿರುತ್ತದೆ.

ದೂರು ಅರ್ಜಿಯಲ್ಲಿ ನಮೂದಿಸಿದ ಶ್ರೀ ಚಂದ್ರ ಶೆಟ್ಟಿಯವರ ಪತ್ನಿ ಶ್ರೀ ಷರೀಪ್ ಸಾಹೇಬರ ಬಾಬ್ತು ಮನೆ ನಂ.1–74 ನೇದನ್ನು ಜಾಗ ಸಮೇತ ನೋಟರಿ ಅಫಿದಾವಿತ್ ಮೂಲಕ ಕ್ರಯಕ್ಕೆ ಪಡೆದುಕೊಂಡಿರುವುದು ಕಂಡುಬಂದಿರುತ್ತದೆ. ಶ್ರೀಮತಿ ಸುಜಾತ ಶೆಡ್ತಿ ರವರು ಸವೇ ನಂಬರ್ 65–25ರ ಸ್ಥಳಕ್ಕೆ ಹೋಗಲು ದಾರಿ ಇಲ್ಲದ ಕಾರಣ ಅದಕ್ಕೆ ತಾಗಿ ಇದ್ದ 65–4ರಲ್ಲಿಯ 9 ಸೆಂಟ್ಸ ಜಾಗವನ್ನು ಹಾಗೂ ಕಟ್ಟಡವನ್ನು ಖರೀದಿಸಿರುವುದಾಗಿ ವಿಚಾರಣೆಯಿಂದ ತಿಳಿದು ಬಂದಿರುತ್ತದೆ. ಕ್ರಯಕ್ಕೆ ಪಡೆದುಕೊಳ್ಳುವ ವೇಳೆ ಸದರಿ ಮನೆಯು ಸರಕಾರಿ ಕುಮ್ಕಿ ಭೂಮಿ ಒತ್ತುವರಿಯಲ್ಲಿದ್ದು, ಆ ಬಳಿಕ ಶ್ರೀಮತಿ ಸುಜಾತ ಶೆಡ್ತಿ ಕೋ ಚಂದ್ರ ಶೆಟ್ಟಿ ರವರು ಮಾನ್ಯ ತಹಶೀಲ್ದಾರರು, ಕುಂದಾಪುರ ಇವರಿಗೆ 94ಸಿ ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ವಿಚಾರಣೆ ಬಳಿಕ ಮಾನ್ಯ ತಹಶೀಲ್ದಾರ್, ಕುಂದಾಪುರ ರವರು ಕಛೇರಿ ಕಡತ ಸಂಖ್ಯೆ: ಹೆಚ್.ಎಸ್.ಟಿ 94 ಸಿಸಿ ಆರ್:33/16–17 ಹೆಚ್.ಎಸ್.ಟಿ (94ಸಿ) ಎಸ್.ಆರ್:295/17–18 ರಂತೆ ದಿ: 04/06/2017 ರಂತೆ ಹಕ್ಕು ಪತ್ರ ನೀಡಿರುವುದು ಕಂಡು ಬಂದಿರುವುದಾಗಿ ವಾಸ್ತವಿಕ ವರದಿಯನ್ನು ಮಾನ್ಯರಲ್ಲಿ ನಿವೇದಿಸಿಕೊಂಡಿರುತ್ತೇನೆ "ಎಂದು ನಮೂದಿರುತ್ತದೆ.

10. ಪಿರ್ಯಾದುದಾರರು ತಮ್ಮ ಪತ್ರ ದಿನಾಂಕ: 20/12/2017 ರಲ್ಲಿ ಸರ್ವೆ ನಂ. 65/4 ರಲ್ಲಿ 080 ಎಕರೆ 65/10 ರಲ್ಲಿ 021 ಎಕರೆ ಹಾಗೂ 200/4 ರಲ್ಲಿ 011 ಎಕರೆ ಒಟ್ಟು 1.12 ಎಕರೆ, ಈ ಪೂರ್ಣ ಸ್ಥಳವೂ ಸರ್ಕಾರಿ

ಸ್ಥಳವಾಗಿದ್ದು, ಈ ಸ್ಥಳದಲ್ಲಿ ಈಗ ಪುನ: ಕಟ್ಟಡ ಕಾಮಗಾರಿ ಮತ್ತು ಗಿಡಗಳನ್ನು ನೆಟ್ಟು ಅಕ್ರಮ ಮಾಡಲು ಶುರು ಮಾಡಿದ್ದಾರೆ. ಈ ಕಾಮಗಾರಿ ಅಕ್ರಮವಾಗಿ ನಡೆಯುತ್ತದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ದೂರು ನೀಡಿದ್ದು ಅಭಿವೃದ್ಧಿ ಅಧಿಕಾರಿಯವರು ಮುಂದಿನ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ನೋಡೋಣ ಎಂಬ ಉತ್ತರ ನೀಡಿರುತ್ತಾರೆ. ಚಂದ್ರಶೆಟ್ಟಿ ರಾಜಕಾರಣಿಯಾಗಿರುತ್ತಾರೆ. ಮಾಜಿ ಪಂಚಾಯತ್ ಸದಸ್ಯರಾಗಿರುತ್ತಾರೆ. ಈ ವ್ಯಕ್ತಿಗಳು ಈ ಅಕ್ರಮ ಮಾಡಿದ ಜಾಗಕ್ಕೆ ಸೈಬಿನ್ ಶಾಹಬುದ್ದಿನ್ ಸಾಹೇಬ್ ಎಂಬುವವರ ಹೆಸರಿನಲ್ಲಿ ಕೃಷಿ ಎಂದು ಹೆಸರಿನಲ್ಲಿ ಕೊಳವೆ ಬಾವಿ ಮಾಡಿ ಅದರ ನೀರನ್ನು ಈ ಸರ್ಕಾರಿ ಜಾಗಕ್ಕೆ ತಂದು ಕಟ್ಟಡ ಕಾಮಗಾರಿ ಗಿಡಗಳನ್ನು ನೆಡಲು ಉಪಯೋಗಿಸಿಕೊಂಡಿರುತ್ತಾರೆ. ಈ ಜಾಗವು ಸಾರ್ವಜನಿಕರಿಗೆ ಉಪಯೋಗಕ್ಕೆ ಒಳ್ಳೆ ಜಾಗವಾಗಿರುತ್ತದೆ. ಈ ಜಾಗದ ತನಿಖೆ ನಡೆಸಿ ಇದನ್ನು ಸರ್ಕಾರಿ ವಶ ಮಾಡಿಕೊಂಡು ಇವರ ಮೇಲೆ ಕಾನೂನು ಕ್ರಮ ಕೈಗೊಂಡು ಈ ಸರ್ಕಾರಿ ಜಾಗವನ್ನು ಸಾರ್ವಜನಿಕ ಉಪಯೋಗಕ್ಕೆ ಕಾದಿರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದೆ ಎಂದು ಗೊತ್ತಿದ್ದರೂ ಕಾಮಗಾರಿ ನಡೆಸುತ್ತಿದ್ದಾರೆ ಎಂದು ನಮೂದಿಸಿರುತ್ತಾರೆ.

11. ದೂರಿನ ಆರೋಪಗಳಿಂದ, ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳಿಂದ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ರವರ ತನಿಖಾ ವರದಿಯ ಅಂಶಗಳಿಂದ ಅಮಾಸೆಬೈಲು ಗ್ರಾಮದ ಸರ್ವೆ ನಂ. 65/4 ರಲ್ಲಿ ಸರ್ಕಾರಿ ಜಾಗದಲ್ಲಿದ್ದ ಆಶ್ರಯ ಯೋಜನೆ ಮನೆ ನಂ. 1-74ಕ್ಕೆ ಸಂಬಂಧಪಟ್ಟಂತೆ ರಿಪೇರಿ ಮಾಡಲೆಂದು ಶರೀಫ್ ಸಾಹೇಬರ್ ಅರ್ಜಿಯಂತೆ ಗ್ರಾಮ ಪಂಚಾಯತ್ ನಿರ್ಣಯ ನಂ. 72/2, ದಿನಾಂಕ: 26/02/2014ರ ಮೇರೆಗೆ ಎದುರುದಾರರು ಪರವಾನಗಿಯನ್ನು ದಿನಾಂಕ: 04/03/2014 ರಂದು ಮಂಜೂರು ಮಾಡಿದ್ದು ಪರವಾನಗಿ ಮಂಜೂರು ಮಾಡುವ ಪೂರ್ವದಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡದೆ ಸರ್ಕಾರಿ ಜಾಗದಲ್ಲಿದ್ದ ಮನೆಗೆ ದುರಸ್ಥಿಯ ಬಗ್ಗೆ ಪರವಾನಗಿ ಮಂಜೂರು ಮಾಡಿದ್ದು ಎದುರುದಾರರು ಕರ್ತವ್ಯ ಲೋಪೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

12. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಅಮಾಸೆಬೈಲು ಗ್ರಾಮದ ಸರ್ವೆ ನಂ. 200, 65/4 ಮತ್ತು 65/10 ರಲ್ಲಿರುವ ಸರ್ಕಾರಿ ಸ್ಥಳವನ್ನು ಸಾರ್ವಜನಿಕರು ಒತ್ತುವರಿ ಮಾಡದಂತೆ ಹಾಗೂ ಒತ್ತುವರಿ ಮಾಡಿದ್ದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಿ ಸರ್ಕಾರಿ ಸ್ಥಳವನ್ನು ಸಂರಕ್ಷಿಸುವ ಸಲುವಾಗಿ ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 27/3

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**